ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 27-07-1970.

*ಅವ್ಯಕ್ತರಾಗಲು ಮುಖ್ಯ ಶಕ್ತಿಗಳ ಧಾರಣೆ* (अव्यक्त बनने के लिए मुख्य शक्तियों की धारणा)

ಇಂದು ಬಾಪ್ ದಾದಾ ಯಾವ ರೂಪದಲ್ಲಿ ನೋಡುತ್ತಿದ್ದಾರೆ? ಒಬ್ಬೊಬ್ಬರ ಮುಖದಲ್ಲಿ ಏನನ್ನು ನೋಡುತ್ತಿದ್ದಾರೆ ಎಂದು ತಿಳಿಯಬಲ್ಲಿರಾ? ಪ್ರತಿಯೊಬ್ಬರೂ ಎಲ್ಲಿಯವರೆಗೆ ಅವ್ಯಕ್ತಮೂರ್ತಿ, ಆಕರ್ಷಣಾಮೂರ್ತಿ, ಅಲೌಕಿಕಮೂರ್ತಿ ಮತ್ತು ಹರ್ಷಿತಮೂರ್ತಿ ಆಗಿದ್ದಾರೆ ಎಂದು ನೋಡುತ್ತಿದ್ದಾರೆ? ನಾಲ್ಕೂ ಲಕ್ಷಣಗಳು ಈ ಮುಖದಲ್ಲಿ ಕಂಡುಬರುತ್ತವೆ. ಯಾರ್ಯಾರು ಎಲ್ಲಿಯವರೆಗೆ ಆಗಿರುವರು ಎಂಬುದನ್ನು ಪ್ರತಿಯೊಬ್ಬರ ಮುಖ ಸಾಕ್ಷಾತ್ಕಾರ ಮಾಡಿಸುತ್ತದೆ. ಕನ್ನಡಿಯಲ್ಲಿ ಹೇಗೆ ಸ್ಥೂಲ ಮುಖವನ್ನು ನೋಡುತ್ತೀರೋ ಹಾಗೆಯೇ ಈ ಲಕ್ಷಣಗಳನ್ನು ಸಹ ನೋಡುತ್ತೀರಾ? ನೋಡುವುದರಿಂದ ತಮ್ಮ ಯಾವ ಸಾಕ್ಷಾತ್ಕಾರವಾಗುತ್ತದೆ? ನಾಲ್ಕೂ ಲಕ್ಷಣಗಳಿಂದ ವಿಶೇಷ ತಮ್ಮಲ್ಲಿ ಏನನ್ನು ನೋಡುತ್ತೀರಿ? ತಮ್ಮನ್ನು ತಾವು ನೋಡಿಕೊಳ್ಳುವ ಅಭ್ಯಾಸ ಪ್ರತಿಯೊಬ್ಬರಿಗೂ ಆಗಬೇಕು. ಅಂತಿಮ ಸ್ಥಿತಿ ಈ ರೀತಿ ಆಗಲಿಕ್ಕಿದೆ ಅದರಲ್ಲಿ ಪ್ರತಿಯೊಬ್ಬರ ಮುಖದಲ್ಲಿ ಈ ಎಲ್ಲಾ ಲಕ್ಷಣಗಳು ಪ್ರಸಿದ್ಧ ರೂಪದಲ್ಲಿ ಕಂಡುಬರುವವು. ಈಗ ಕೆಲವು ಗುಪ್ತವಾಗಿವೆ, ಕೆಲವು ಪ್ರತ್ಯಕ್ಷವಾಗಿವೆ. ಕೆಲವು ಗುಣ ವಿಶೇಷವಾಗಿವೆ ಇನ್ನು ಕೆಲವು ಅವುಗಳಿಗಿಂತ ಕಡಿಮೆಯಿವೆ. ಆದರೆ ಸಂಪೂರ್ಣ ಸ್ಥಿತಿಯಲ್ಲಿ ಈ ಎಲ್ಲಾ ಲಕ್ಷಣಗಳು ಸಮಾನ ರೂಪದಲ್ಲಿ, ಪ್ರತ್ಯಕ್ಷ ರೂಪದಲ್ಲಿ ಕಂಡು ಬರುವವು. ಅದರಿಂದಲೇ ಎಲ್ಲರೂ ನಂಬರ್ ವಾರಾಗಿ ಪ್ರತ್ಯಕ್ಷ ಆಗುವರು. ಎಷ್ಟೆಷ್ಟು ಯಾರಲ್ಲಿ ಪ್ರತ್ಯಕ್ಷ ರೂಪದಲ್ಲಿ ಗುಣಗಳು ಬರುತ್ತಿವೆಯೋ ಅಷ್ಟಷ್ಟು ಪ್ರತ್ಯಕ್ಷತೆಯೂ ಆಗುತ್ತಿದೆ.

ಇಂದು ವಿಶೇಷವಾಗಿ ಯಾವ ಕೆಲಸಕ್ಕೆ ಬಂದಿರುವಿರಿ? (ಸೇವೆಗಾಗಿ) ಪಾಂಡವರ ಭಟ್ಟಿಯ ಆರಂಭವಾಗಿದೆ. ತಮ್ಮಲ್ಲಿ ಯಾವ ನವೀನತೆಯನ್ನು ತರಬೇಕೆಂದು ಗೊತ್ತಿದೆಯೇ? ವಿಶೇಷ ಭಟ್ಟಿಯಲ್ಲಿ ಬಂದಿರುವಿರಿ ಹಾಗಾದರೆ ವಿಶೇಷ ಏನನ್ನು ಧಾರಣೆ ಮಾಡುವಿರಿ? (ಪ್ರತಿಯೊಬ್ಬರೂ ತಮ್ಮ ಗುರಿಯನ್ನು ಹೇಳಿದರು) ಈ ಪಾಂಡವ ಸೇನೆಯಿಂದ ಏನು ಮಾಡಿಸುವುದು ಎಂದು ನಿಮಿತ್ತ ಶಿಕ್ಷಕಿಯರೇ ಹೇಳಿ. ಇವರು ಮೊದಲೇ ಕೇಳಿ ತಮ್ಮಲ್ಲಿ ಎಲ್ಲಾ ವಿಚಾರಗಳನ್ನು ತುಂಬಿಕೊಳ್ಳುವ ಪ್ರಯತ್ನ ಮಾಡುವರು. ಆಗ ತಮಗೆ ಪರಿಶ್ರಮ ಮಾಡಬೇಕಾಗಿಲ್ಲ. ತಾವು ಇವರಿಂದ ಏನನ್ನು ಬಯಸುತ್ತೀರಿ? ಇವರು ಒಂದು ಕ್ಷಣದಲ್ಲಿ ತಮ್ಮನ್ನು ಪರಿವರ್ತನೆ ಮಾಡಿಕೊಳ್ಳಬಹುದು. ಏನೂ ಕಷ್ಟವಾಗಲಾರದು ಮತ್ತು ಯಾರು ನಿಮಿತ್ತರಾಗಿರುವವರೋ ಅವರಿಗೆ ಸಹಯೋಗವೂ ಬಹಳ ಸಿಗುವುದು. ಕಲ್ಪದ ಹಿಂದಿನ ಪಾಂಡವ ಸೇನೆ ಪ್ರಸಿದ್ಧವಾಗಿದೆ. ಪಾಂಡವರ ಕರ್ತವ್ಯದ ಸ್ಮೃತಿಚಿಹ್ನೆ ಪ್ರಸಿದ್ಧವಾಗಿದೆ. ಕಲ್ಪದ ಹಿಂದೆ ಆಗಿರುವುದು ಈಗ ಕೇವಲ ಪುನರಾವರ್ತನೆ ಮಾಡುವುದು. ಅವ್ಯಕ್ತರಾಗಲು ಅಥವಾ ಯಾವ ಗುರಿಯನ್ನು ತಾವೆಲ್ಲ ಹೇಳಿದಿರೋ, ಅದನ್ನು ಪೂರ್ಣ ಮಾಡಲು ತಮ್ಮಲ್ಲಿ ಏನನ್ನು ಧಾರಣೆ ಮಾಡಬೇಕು ಎಂಬುದನ್ನು ಇಂದು ಹೇಳುತ್ತೇವೆ. ಸರ್ವ ಪಾಂಡವರು ತಮ್ಮನ್ನು ಏನೆಂದು ಕರೆಸಿಕೊಳ್ಳುತ್ತೀರಿ? ಸರ್ವೋಚ್ಚ ಪರಮಪಿತನ ಮಕ್ಕಳು ಎಂದು ಹೇಳಿಸಿಕೊಳ್ಳುತ್ತೀರಲ್ಲವೇ? ಹಾಗಾದರೆ ಅವ್ಯಕ್ತರಾಗಲು ಮುಖ್ಯ ಯಾವ ಶಕ್ತಿಗಳನ್ನು ತಮ್ಮಲ್ಲಿ ಧಾರಣೆ ಮಾಡಬೇಕು? ಆಗಲೇ ತಮ್ಮಗುರಿ ಪೂರ್ಣವಾಗಬಲ್ಲದು. ಭಟ್ಟಿಯಿಂದ ಮುಖ್ಯ ಯಾವ ಶಕ್ತಿಗಳನ್ನು ಧಾರಣೆ ಮಾಡಿಕೊಂಡು ಹೋಗಬೇಕು ಎಂಬುದನ್ನು ಹೇಳುತ್ತೇವೆ. ಬಹಳ ಇವೆ, ಆದರೆ ಮುಖ್ಯವಾಗಿ ಸಹನಶಕ್ತಿ, ಪರೀಕ್ಷಿಸುವ ಶಕ್ತಿ, ವಿಸ್ತಾರವನ್ನು ಸಾರಗೊಳಿಸುವ ಶಕ್ತಿ ಮತ್ತು ಸಾರವನ್ನು ವಿಸ್ತಾರಗೊಳಿಸುವ ಶಕ್ತಿ ಬೇಕು. ಕೆಲವೆಡೆ ವಿಸ್ತಾರವನ್ನು ಕಡಿಮೆ ಮಾಡಬೇಕು ಮತ್ತು ಕೆಲವೆಡೆ ಸಾರವನ್ನು ವಿಸ್ತಾರ ಮಾಡಬೇಕಾಗುತ್ತದೆ. ಸಂಕೀರ್ಣಗೊಳಿಸುವ ಶಕ್ತಿ, ಎದುರಿಸುವ ಶಕ್ತಿ, ಸಮಾವೇಶಗೊಳಿಸುವ ಶಕ್ತಿ ಮತ್ತು ನಿರ್ಣಯ ಮಾಡುವ ಶಕ್ತಿ ಬೇಕು. ಇವುಗಳ ಜೊತೆಗೆ ಸರ್ವರನ್ನು ಸ್ನೇಹಿ ಮತ್ತು ಸಹಯೋಗಿ ಮಾಡಿಕೊಳ್ಳುವ ಸರ್ವರನ್ನೂ ಹೊಂದಾಣಿಕೆ ಮಾಡಿಕೊಳ್ಳುವ ಶಕ್ತಿ ಬೇಕು. ಈ ಎಲ್ಲಾ ಶಕ್ತಿಗಳನ್ನು ಧಾರಣೆ ಮಾಡಿಕೊಳ್ಳಬೇಕು. ಆಗಲೇ ಎಲ್ಲಾ ಲಕ್ಷಣಗಳು ಪೂರ್ಣವಾಗುವವು. ಮಾಡಿಕೊಂಡೇ ಹೋಗಬೇಕು. ಇದು ನಿಶ್ಚಯ ಬುದ್ಧಿಯವರ ಮಾತಾಗಿದೆ. ಇದಕ್ಕಾಗಿ

ವಿಶೇಷವಾಗಿ ಆತ್ಮೀಯತೆಯನ್ನೂ ಧಾರಣೆ ಮಾಡಬೇಕು ಮತ್ತು ಈಶ್ವರೀಯ ಸುಗಂಧ ಬೇಕು. ಈ ಎರಡು ಮಾತುಗಳನ್ನು ಧಾರಣೆ ಮಾಡಬೇಕು ಮತ್ತು ಒಂದು ಮಾತನ್ನು ಬಿಡಬೇಕು. ಅದು ಯಾವುದು? (ಕೆಲವರು ದರ್ಪವನ್ನು ಬಿಡಬೇಕು. ಇನ್ನು ಕೆಲವರು ಹೀನಭಾವವನ್ನು ಬಿಡಬೇಕು ಎಂದರು) ಇದು ಸರಿಯಾಗಿದೆ. ಅಲ್ಲಲ್ಲಿ ತಮ್ಮ ಮೇಲೆ ವಿಶ್ವಾಸವಿಲ್ಲದ ಕಾರಣ ಅನೇಕ ಕಾರ್ಯಗಳನ್ನು ಸಿದ್ಧ ಮಾಡಲಾಗುವುದಿಲ್ಲ. ಆದ್ದರಿಂದ ಹೀನಭಾವವನ್ನು ಬಿಡಬೇಕು. ದರ್ಪವನ್ನು ಬಿಡಬೇಕು. ಎರಡನೆಯದಾಗಿ ಒಮ್ಮೆ ಒಂದು ಮತ್ತೊಮ್ಮೆ ಮತ್ತೊಂದು ರೀತಿಯ ಭಿನ್ನ -ಭಿನ್ನ ರೂಪ ಬದಲಾಯಿಸುವುದನ್ನು ಬಿಟ್ಟು ಒಂದು ಅವ್ಯಕ್ತ ಮತ್ತು ಅಲೌಕಿಕ ರೂಪವನ್ನು ಭಟ್ಟಿಯಲ್ಲಿ ಧಾರಣೆ ಮಾಡಿಕೊಂಡು ಹೋಗಬೇಕು. ಒಳ್ಳೆಯದು. ತಿಲಕವನ್ನು ಆಗಲೇ ಹಚ್ಚಲಾಗಿದೆ. ಈಗ ಕೇವಲ ಭಟ್ಟಿಯ ಉಡುಗೊರೆಯನ್ನು ಕೊಡಬೇಕು. ಉಡುಗೊರೆಯನ್ನು ಯಾರು ಕೊಡುವರು? ತಿಲಕ ಹಚ್ಚಲಾಗಿದೆ, ಮುಕುಟಧಾರಿಗಳು ಆಗಿರುವಿರೋ ಅಥವಾ ಕಿರೀಟವನ್ನು ಕೊಡಬೇಕೋ? ಈಗ ಚಿಕ್ಕ ಕಿರೀಟವನ್ನು ಧಾರಣೆ ಮಾಡಿದರೆ ಭವಿಷ್ಯದಲ್ಲಿಯೂ ಕಡಿಮೆಯಾಗುವುದು. ಭಟ್ಟಿಯಲ್ಲಿ ವಿಶ್ವ ಮಹಾರಾಜನ್ ಆಗಲು ಬಂದಿರುವಿರಿ. ಎಲ್ಲಕ್ಕಿಂತ ದೊಡ್ಡ ಕಿರೀಟ ವಿಶ್ವ ಮಹಾರಾಜನದಾಗಿದೆ. ಅವರ ಜವಾಬ್ದಾರಿಗಳು ಯಾವವು ಎಂಬ ಪಾಠವನ್ನು ಹೇಳಬೇಕು.

ಇದೂ ಒಂದು ಒಳ್ಳೆಯ ಸಮಾಗಮವಾಗಿದೆ. ತಮ್ಮ ಶಿಕ್ಷಕಿ (ಚಂದ್ರಮಣಿ) ಬಹಳ ಖುಷಿ ಪಡುತ್ತಿದ್ದಾರೆ ಏಕೆಂದರೆ ನಮ್ಮ ಎಲ್ಲಾ ವಿದ್ಯಾರ್ಥಿಗಳು ವಿಶ್ವ ಮಹಾರಾಜನ್ ಆಗುವರು ಎಂದು ನೋಡುತ್ತಿದ್ದಾರೆ. ಈ ಗುಂಪಿನ ಹೆಸರು ಏನಾಗಿದೆ ಎಂದು ಗೊತ್ತಿದೆಯೇ? ಒಬ್ಬೊಬ್ಬರಲ್ಲಿ ವಿಶೇಷ ಗುಣವಿದೆ. ಆದ್ದರಿಂದ ಇದು ವಿಶೇಷ ಆತ್ಮರ ಗುಂಪಾಗಿದೆ. ತಮ್ಮನ್ನು ವಿಶೇಷ ಆತ್ಮ ಎಂದು ತಿಳಿಯುತ್ತೀರಾ? ನೋಡಿದಿರಾ, ತ್ರಿಮೂರ್ತಿಯ ಕೀಚೈನ್ ಉಡುಗೊರೆಯಾಗಿ ಕೊಡುತ್ತಾರೆ. ಈ ಗುರಿಯನ್ನು ನೋಡಿ ಇಂತಹ ಲಕ್ಷಣ ಧಾರಣೆ ಮಾಡಬೇಕು. ಒಬ್ಬೊಬ್ಬರ ಸಂಸ್ಕಾರಗಳನ್ನು ಹೊಂದಾಣಿಕೆ ಮಾಡಿಕೊಳ್ಳಬೇಕು ಜೊತೆಗೆ ಈ ಕೀಲಿಕೈ ಮೇಲಿರುವ ಚಿಹ್ನೆ ಎಂದರೆ ಹೇಳಿದಂತಹ ಸರ್ವಶಕ್ತಿಗಳ ಕೀಲಿಕೈಯನ್ನು ತೆಗೆದುಕೊಂಡು ಹೋಗಬೇಕು. ಆದರೆ ಈ ಎರಡೂ ಮಾತುಗಳು ರಚಯಿತ ಮತ್ತು ರಚನೆಯ ಯಥಾರ್ಥ ಜ್ಞಾನ, ಸ್ಮೃತಿಯಲ್ಲಿ ಕಾಯಂ ಇದ್ದಾಗ ಮಾತ್ರ ಇರಲು ಸಾಧ್ಯ. ಇದಕ್ಕಾಗಿ ಈ ನೆನಪಿನ ಕಾಣಿಕೆಯಾಗಿದೆ. ತಮ್ಮನ್ನು ಸಫಲತೆಯ ಮೂರ್ತಿ ಎಂದು ತಿಳಿಯುತ್ತೀರಾ? ಸಫಲತೆ ಎಂದರೆ ಸಂಪೂರ್ಣ ಗುಣ ಧಾರಣೆ ಮಾಡುವುದು. ಎಲ್ಲಾ ಮಾತುಗಳಲ್ಲಿ ಸಫಲತೆಯಿದ್ದರೆ ಅದರ ಹೆಸರೇ ಆಗಿದೆ ಸಂಪೂರ್ಣ ಮೂರ್ತಿ. ಸಫಲತೆಯ ನಕ್ಷತ್ರಗಳಾಗಿದ್ದೇವೆ ಎಂಬ ಸ್ಮೃತಿಯಲ್ಲಿದ್ದು ಕೆಲಸ ಮಾಡುವುದರಿಂದಲೇ ಸಫಲತೆಯ ಅಧಿಕಾರ ಪ್ರಾಪ್ತಿಯಾಗುವುದು. ಸಫಲತೆಯ ನಕ್ಷತ್ರವಾಗುವುದರಿಂದ ಎದುರಿಸುವ ಶಕ್ತಿ ಬರುತ್ತದೆ. ಸಫಲತೆಯನ್ನು ಎದುರಿಗೆ ಇಟ್ಟುಕೊಳ್ಳುವುದರಿಂದ ಸಮಸ್ಯೆ ಉಲ್ಟಾ ಆಗಿ ಸಫಲತೆ ಪ್ರಯೋಗದಲ್ಲಿ ಸಿಗುತ್ತದೆ. ಸಮೀಪ ನಕ್ಷತ್ರಗಳ ಲಕ್ಷಣವೇನು? ಯಾರ ಸಮೀಪವೋ ಅವರ ಸಮಾನರಾಗಬೇಕು. ಸಮೀಪ ನಕ್ಷತ್ರಗಳಲ್ಲಿ ಬಾಪ್ ದಾದಾರ ಗುಣ ಮತ್ತು ಕರ್ತವ್ಯ ಪ್ರತ್ಯಕ್ಷ ಕಂಡುಬರುವವು. ಎಷ್ಟು ಸಮೀಪತೆಯೋ ಅಷ್ಟು ಸಮಾನತೆಯನ್ನು ಕಾಣುವಿರಿ. ಅವರ ಮುಖ ಬಾಪ್ ದಾದಾರ ಸಾಕ್ಷಾತ್ಕಾರ ಮಾಡಿಸುವ ದರ್ಪಣವಾಗಿರುವುದು. ಅವರಿಗೆ ಬಾಪ್ ದಾದಾರ ಪರಿಚಯ ಕೊಡುವ ಪ್ರಯತ್ನ ಕಡಿಮೆ ಮಾಡಬೇಕಾಗುತ್ತದೆ ಏಕೆಂದರೆ ಅವರು ಸ್ವಯಂ ಪರಿಚಯ ಕೊಡುವ ಅವರನ್ನು ನೋಡುತ್ತಲೇ ಬಾಪ್ ದಾದಾರ ಪರಿಚಯ ಪ್ರಾಪ್ತಿಯಾಗುತ್ತದೆ. ಸೇವೆಯಲ್ಲಿ ಈ ರೀತಿ ಪ್ರತ್ಯಕ್ಷ ಪ್ರಮಾಣ ಕಾಣುವಿರಿ. ತಮ್ಮನ್ನು ನೋಡುವರು ಆದರೆ ಆಕರ್ಷಣೆ ಬಾಪ್ ದಾದಾರ ಕಡೆಗಿರುವುದು. ಇದನ್ನೇ ಮಗ ತಂದೆಯನ್ನು ತೋರಿಸುತ್ತಾನೆ (ಸನ್ ಶೋಸ್ ಫಾದರ್). ಸ್ನೇಹ ಸಮೀಪ ತರುತ್ತದೆ. ತಮ್ಮ ಸ್ನೇಹದ ಮೂರ್ತಿಯನ್ನು ತಿಳಿದಿದ್ದೀರಾ? ಸ್ನೇಹ ಎಂದೂ ಗುಪ್ತವಾಗಿರಲಾರದು. ಸ್ನೇಹಿಯ ಪ್ರತಿ ಹೆಜ್ಜೆಯಿಂದ, ಯಾರೊಂದಿಗೆ ಸ್ನೇಹವಿದೆಯೋ ಅವರ ಮುದ್ರೆ ಕಂಡು ಬರುತ್ತದೆ. ಎಷ್ಟು ಹರ್ಷಿತಮೂರ್ತಿಯೋ ಅಷ್ಟು ಆಕರ್ಷಣಾ ಮೂರ್ತಿಯಾಗಬೇಕು ಸದಾ ಆಕರ್ಷಣಾಮೂರ್ತಿ ಆಗಿರಲು ಆಕಾರಿ ರೂಪಧಾರಿಯಾಗಿ ಸಾಕಾರ ಕರ್ತವ್ಯದಲ್ಲಿ ಬರಬೇಕು. ಅಂತರ್ಮುಖಿ ಮತ್ತು ಏಕಾಂತವಾಸಿಯ ಲಕ್ಷಣ ಧಾರಣೆ ಮಾಡಿದಾಗ ಯಾವ ಗುರಿಯನ್ನು ಇಟ್ಟುಕೊಂಡಿರುವಿರೋ ಅದರ ಸಹಜ ಪ್ರಾಪ್ತಿಯಾಗುವುದು. ಸಾಧನೆಯಿಂದ ಸಿದ್ಧಿಯಾಗುತ್ತದೆಯಲ್ಲವೇ?

ಸೇವೆಯಲ್ಲಿ ಸದಾ ಸಂಪೂರ್ಣ ಸಫಲತೆಗಾಗಿ ವಿಶೇಷ ಯಾವ ಗುಣವನ್ನು ಸಮ್ಮುಖದಲ್ಲಿ ಇಟ್ಟುಕೊಳ್ಳಬೇಕು. ಸಾಕಾರ ರೂಪದಲ್ಲಿ ವಿಶೇಷ ಯಾವ ಗುಣವಿರುವ ಕಾರಣ ಸಫಲತೆ ಪ್ರಾಪ್ತಿಯಾಯಿತು? (ಉದಾರಚಿತ್ತ) ಎಷ್ಟು ಉದಾರಚಿತ್ತರೋ ಅಷ್ಟು ಸರ್ವರ ಉದ್ಧಾರ ಮಾಡಲು ನಿಮಿತ್ತರಾಗಬಹುದು. ಉದಾರ ಚಿತ್ತರಾಗುವುದರಿಂದ ಸಹಯೋಗ ಪಡೆಯಲು ಪಾತ್ರರಾಗುತ್ತಾರೆ. ನಾವು ಸರ್ವ ಆತ್ಮರ ಉದ್ಧಾರ ಮಾಡಲು ನಿಮಿತ್ತರಾಗಿದ್ದೇವೆ ಎಂದು ತಿಳಿಯಬೇಕು. ಆದ್ದರಿಂದ ಪ್ರತಿಯೊಂದು ಮಾತಿನಲ್ಲಿ ಉದಾರಚಿತ್ತ. ಮನಸ್ಸಿನಲ್ಲಿ, ಮಾತಿನಲ್ಲಿ, ಕರ್ಮದಲ್ಲಿ ಉದಾರಚಿತ್ತರಾಗಬೇಕು. ಸಂಪರ್ಕದಲ್ಲಿಯೂ ಆಗಬೇಕು. ಆಗುತ್ತಿರುವಿರಿ ಮತ್ತೂ ಆಗಿರಿ. ಯಾರು ಎಷ್ಟು ಉದಾರಚಿತ್ತರಾಗಿರುವರೋ ಅಷ್ಟು ಅವರು ಆಕರ್ಷಣಾ ಮೂರ್ತಿ ಆಗಿರುತ್ತಾರೆ. ಆದ್ದರಿಂದ ಇದೇ ಪ್ರಯತ್ನವನ್ನು ಮುಂದುವರೆಸಿ ಪ್ರತ್ಯಕ್ಷತೆಯನ್ನು ತರಬೇಕು. ಮಧುಬನದಲ್ಲಿರುತ್ತಾ ಮಧುರತೆ ಮತ್ತು ಬೇಹದ್ದಿನ ವೈರಾಗ್ಯ ವೃತ್ತಿಯನ್ನು ಧಾರಣೆ ಮಾಡಬೇಕು. ಮಧುಬನದ ಮುಖ್ಯ ಲಕ್ಷಣ ಇದಾಗಿದೆ. ಇದನ್ನೇ ಮಧುಬನ ಎನ್ನಲಾಗುತ್ತದೆ. ಹೊರಗಡೆ ಇದ್ದರೂ ಈ ಧಾರಣೆಯಿದ್ದರೆ ಅವರು ಮಧುಬನ ನಿವಾಸಿ. ಇಲ್ಲಿ ಎಷ್ಟು ಜವಾಬ್ದಾರಿ ತೆಗೆದುಕೊಳ್ಳುತ್ತೀರೋ ಅಷ್ಟು ಅಲ್ಲಿ ಪ್ರಜೆಗಳಿಂದ ಗೌರವ ಸಿಗುತ್ತದೆ. ಸಹಯೋಗ ಪಡೆಯಲು ಸ್ನೇಹಿಯಾಗಬೇಕು. ಸರ್ವರ ಸ್ನೇಹಿ, ಸರ್ವರ ಸಹಯೋಗಿ. ಎಷ್ಟೆಷ್ಟು ಚಕ್ರವರ್ತಿಯಾಗುವಿರೋ ಅಷ್ಟು ಸರ್ವರ ಸಂಬಂಧದಲ್ಲಿ ಬರುವಿರಿ, ಈ ಗುಂಪು ವಿಶೇಷ ಚಕ್ರವರ್ತಿಯಾಗಬೇಕು ಏಕೆಂದರೆ ಸರ್ವ ಸಂಬಂಧದಲ್ಲಿ ಬರುವುದರಿಂದ ಸರ್ವರಿಗೂ ಸಹಯೋಗ ಕೊಡಬಹುದು ಮತ್ತು ಸರ್ವರ ಸಹಯೋಗ ಪಡೆಯಬಹುದು. ಪ್ರತಿಯೊಂದು ಆತ್ಮನ ವಿಶೇಷತೆಯನ್ನು ಕೇಳುತ್ತಾ, ಸಂಪರ್ಕದಲ್ಲಿ ಬರುತ್ತಾ ಆ ವಿಶೇಷತೆಗಳು ಸ್ವಯಂನಲ್ಲಿ ಬರುತ್ತವೆ. ಆದ್ದರಿಂದ ಸರ್ವರ ಸಹಯೋಗಿ ಆಗಬೇಕು. ಇದಕ್ಕಾಗಿ ಪಾಂಡವ ಸೇನೆ ಚಕ್ರವರ್ತಿಯಾಗಬೇಕು. ಯೋಗದ ಅಗ್ನಿ ಸದಾ ಉರಿಯುತ್ತಿರಲು ಮನ-ವಚನ-ಕರ್ಮ ಮತ್ತು ಸಂಬಂಧ ಈ ನಾಲ್ಕೂ ಮಾತುಗಳನ್ನು ನೆನಪಿಡಬೇಕು. ಆಗ ಈ ಅಗ್ನಿ ಅವಿನಾಶಿಯಾಗಿರುವುದು. ಮತ್ತೆ ಮತ್ತೆ ನಂದುವುದು ಮತ್ತು ಉರಿಸುವುದರಲ್ಲಿ ಸಮಯ ವ್ಯರ್ಥ ಹೋಗುವುದು ಮತ್ತು ಪದವಿಯೂ ಕಡಿಮೆ ಸಿಗುವುದು. ಎಷ್ಟು ಸ್ನೇಹವಿದೆಯೋ ಅಷ್ಟು ಶಕ್ತಿಯನ್ನೂ ಇಟ್ಟುಕೊಳ್ಳಿ. ಒಂದು ಕ್ಷಣದಲ್ಲಿ ಆಕಾರಿ ಮತ್ತು ಒಂದು ಕ್ಷಣದಲ್ಲಿ ಸಾಕಾರಿಯಾಗುವಿರಾ? ಇದೂ ಆವಶ್ಯಕ ಸೇವೆಯಾಗಿದೆ. ಸೇವೆಗೆ ಹೇಗೆ ಅನೇಕ ಸಾಧನಗಳಿವೆಯೋ ಹಾಗೆ ಈ ಅಭ್ಯಾಸವೂ ಅನೇಕ ಆತ್ಮರ ಕಲ್ಯಾಣಕ್ಕಾಗಿ ಒಂದು ಸಾಧನವಾಗಿದೆ. ಈ ಸೇವೆಯಿಂದ ಯಾವುದೇ ಆತ್ಮನನ್ನು ಆಕರ್ಷಣೆ ಮಾಡಬಹುದು. ಇದರಲ್ಲಿ ಖರ್ಚು ಸಹ ಏನೂ ಇಲ್ಲ. ಕಡಿಮೆ ಖರ್ಚು ಹೆಚ್ಚು ಫಲವಿರುವಂತಹ ಯೋಜನೆಗಳನ್ನು ಮಾಡಿ. ಈಗ ಪ್ರತಿಯೊಬ್ಬರಲ್ಲಿ ಯಾವುದಾದರೂ ಒಂದು ವಿಶೇಷ ಶಕ್ತಿಯಿದೆ. ಆದರೆ ಸರ್ವಶಕ್ತಿಗಳು ಬಂದಾಗ ಏನಾಗುವಿರಿ? ಮಾಸ್ಟರ್ ಸರ್ವಶಕ್ತಿವಂತ. ಎಲ್ಲಾ ಗುಣಗಳಲ್ಲಿ ಶ್ರೇಷ್ಠರಾಗಬೇಕು. ಇಷ್ಟ ದೇವತೆಗಳಲ್ಲಿ ಸರ್ವಶಕ್ತಿಗಳು ಸಮಾನ ರೂಪದಲ್ಲಿರುತ್ತವೆ. ಆದ್ದರಿಂದ ಈ ಪುರುಷಾರ್ಥವನ್ನು ಮಾಡಬೇಕು.

ಅವ್ಯಕ್ತ ಮುರಳಿ 27-07-1970.

***ಅವ್ಯಕ್ತರಾಗಲು ಮುಖ್ಯ ಶಕ್ತಿಗಳ ಧಾರಣೆ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಅವ್ಯಕ್ತ ಮೂರ್ತಿ, ಆಕರ್ಷಣಾ ಮೂರ್ತಿ, ಅಲೌಕಿಕ ಮೂರ್ತಿ ಮತ್ತು ಹರ್ಷಿತ ಮೂರ್ತಿ.

2. ನಾನು ಪ್ರತ್ಯಕ್ಷ ರೂಪದಲ್ಲಿ ಗುಣಗಳನ್ನು ಧಾರಣೆ ಮಾಡಿರುವ ಪ್ರತ್ಯಕ್ಷತಾ ಸ್ವರೂಪ.

3. ಸರ್ವಶಕ್ತಿವಂತನಾದ ತಂದೆಗೆ ಮಗುವಾದ ನಾನು ಕಷ್ಟವೆಂಬುದೇ ತಿಳಿಯದ ಪಾಂಡವ ಸ್ವರೂಪ.

4. ನಾನು ಸಹನಾಶಕ್ತಿ, ಪರಿಶೀಲನೆಯ ಶಕ್ತಿ, ವಿಸ್ತಾರವನ್ನು ಸಾರ ಗೊಳಿಸುವ ಶಕ್ತಿ, ಸಾರವನ್ನು ವಿಸ್ತಾರಗೊಳಿಸುವ ಶಕ್ತಿಯನ್ನು ಧಾರಣೆ ಮಾಡಿದ್ದೇನೆ.

5. ನಾನು ಸರ್ವಶಕ್ತಿಗಳೊಂದಿಗೆ ಸರ್ವರನ್ನು ಸ್ನೇಹಿ ಮತ್ತು ಸಹಯೋಗಿಯನ್ನಾಗಿ ಮಾಡಿಕೊಂಡು ಅರ್ಥಾತ್ ಎಲ್ಲರೊಂದಿಗೆ ಆತ್ಮೀಯತೆಯಿಂದ ಇರುವ ನಿಶ್ಚಯ ಬುದ್ಧಿ ಸ್ವರೂಪ.

6. ನಾನು ಒಂದೇ ಅವ್ಯಕ್ತ ಮತ್ತು ಅಲೌಕಿಕ ರೂಪದಲ್ಲಿ ಸದಾ ಇದ್ದೇನೆ.

7. ನಾನು ಸಂಪೂರ್ಣ ಗುಣಗಳನ್ನು ಧಾರಣೆ ಮಾಡಿ "ನಾನು ಸಫಲತೆಯ ನಕ್ಷತ್ರ" ಎಂಬ ಸ್ಮೃತಿಯಿಂದ ಪ್ರತಿ ಕಾರ್ಯವನ್ನು ಮಾಡಿರುವ ಸಫಲತೆಯ ಅಧಿಕಾರಿ.

8. ನಾನು ತಂದೆಗೆ ಸಮೀಪ ಮತ್ತು ಸಮಾನವಾಗಿ ಬಾಪ್ ದಾದಾರವರ ಗುಣಗಳು, ಕರ್ತವ್ಯವನ್ನು ಪ್ರತ್ಯಕ್ಷ ಮಾಡಿಸುವ ದರ್ಪಣವಾಗಿದ್ದೇನೆ.

9. ನಾನು ಸದಾ ಹರ್ಷಿತ ಮೂರ್ತಿ ಮತ್ತು ಉದಾರಚಿತ್ತವಾಗಿ ಇರುವ ಆಕರ್ಷಣಾಮೂರ್ತಿ.

10. ನಾನು ಆಕಾರ ರೂಪಧಾರಿಯಾಗಿ ಸಾಕಾರ ಕರ್ತವ್ಯದಲ್ಲಿದ್ದು, 'ಅಂತರ್ಮುಖಿ ಮತ್ತು ಏಕಾಂತ ವಾಸಿ' ಎಂಬ ಎರಡು ಲಕ್ಷಣಗಳನ್ನು ಧಾರಣೆ ಮಾಡಿದ್ದೇನೆ.

11. ನಾನು ಎಲ್ಲಿದ್ದರೂ ಮಧುರತೆ ಮತ್ತು ಬೇಹದ್ ವೈರಾಗ್ಯವೃತ್ತಿಯನ್ನು ಧಾರಣೆ ಮಾಡಿರುವ ಮಧುಬನ ನಿವಾಸಿ.

12. ನಾನು ಸರ್ವರ ಸಂಬಂಧದಲ್ಲಿ ಬಂದು ಸರ್ವರಿಗೆ ಸಹಯೋಗವನ್ನು ಕೊಟ್ಟು ಸರ್ವರಿಂದ ಸಹಯೋಗವನ್ನು ಪಡೆದಿದ್ದೇನೆ. ಮತ್ತು ಪ್ರತಿಯೊಬ್ಬರ ವಿಶೇಷತೆಗಳನ್ನು ಧಾರಣೆ ಮಾಡಿದ್ದೇನೆ.

13. ನಾನು ಮನಸಾ, ವಾಚಾ, ಕರ್ಮಣಾ ಮತ್ತು ಸಂಬಂಧ ಈ ನಾಲ್ಕು ವಿಷಯಗಳ ಸ್ಮೃತಿಯಿಂದ ನನ್ನ ಯೋಗಾಗ್ನಿಯನ್ನು ಅವಿನಾಶಿಯಾಗಿ ಮಾಡಿಕೊಂಡಿದ್ದೇನೆ.

14. ನಾನು ಒಂದು ಕ್ಷಣದಲ್ಲಿ ಆಕಾರಿ ಮತ್ತೊಂದು ಕ್ಷಣದಲ್ಲಿ ನಿರಾಕಾರಿಯಾಗಿ ಎಲ್ಲರನ್ನೂ ಆಕರ್ಷಣೆ ಮಾಡಿದ್ದೇನೆ.

15. ನಾನು 'ಕಡಿಮೆ ಖರ್ಚು ಹೆಚ್ಚು ಫಲಿತಾಂಶ'ವನ್ನು ಹೊಂದುವ ಯೋಜನೆಯನ್ನು ತಯಾರು ಮಾಡಿಕೊಂಡಿದ್ದೇನೆ.

16. ನಾನು ಸರ್ವಶಕ್ತಿಗಳನ್ನು ಸಮಾನ ರೂಪದಲ್ಲಿ ಧಾರಣೆ ಮಾಡಿರುವ ಇಷ್ಟದೇವತೆಯಾಗಿದ್ದೇನೆ.